ಭಾರತದ ರೇಷ್ಮೆಗೆ ಜಾಗತಿಕ ಮಾರುಕಟ್ಟೆ ಸೃಷ್ಟಿ: ಸಚಿವೆ

ವಿಕ ಸುದ್ದಿಲೋಕ ರಾಮನಗರ

ನಗರದ ರೇಷ್ಮೆಗೂಡು ಮಾರುಕಟ್ಟೆಗೆ ಕೇಂದ್ರ ರೈಲ್ವೆ ಮತ್ತು ಜವಳಿ ಖಾತೆ ರಾಜ್ಯ ಸಚಿವೆ ದರ್ಶನಾ ಜರ್ದೋಶ್ ಗುರುವಾರ ಭೇಟಿ ನೀಡಿ, ರೇಷ್ಮೆಗೂಡು ಪೂರೈಕೆ, ಬೆಳೆಗಾರರಿಗೆ ಹಣ ಪಾವತಿ ವಿಧಾನ ಹಾಗೂ ಗೂಡಿನ ಗುಣಮಟ್ಟ ಪರಿಶೀಲನೆ ನಡೆಸಿದರು.

ವೀಕ್ಷಣೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ''ದೇಶದಲ್ಲಿ ಬೇಡಿಕೆಗೆ ಅನುಗುಣವಾಗಿ ರೇಷ್ಮೆ ಉತ್ಪಾದನೆಯಾಗದ ಕಾರಣ ಆತ್ಮನಿರ್ಭರ್ ಭಾರತ್ ಅಭಿಯಾನದಲ್ಲಿ ರೇಷ್ಮೆ ಉತ್ಪಾದನೆ ಹೆಚ್ಚಿಸಿ ನೇಕಾರಿಕೆ ಮಾರುಕಟ್ಟೆ ವಲಯ ಬಲಿಷ್ಠಗೊಳಿಸುವುದರ ಜತೆಗೆ ರೇಷ್ಮೆ ರಫ್ತು ವಲಯವನ್ನು ಮತ್ತಷ್ಟು ಸರ್ಧಾತ್ಮಕಗೊಳಿಸಿ

ರಾಮನಗರ ಮಾರುಕಟ್ಟೆಗೆ ದರ್ಶನಾ ಜರ್ದೋಶ್ ಭೇಟಿ



ಜಾಗತಿಕ ಮಾರುಕಟ್ಟೆ ಸೃಷ್ಟಿಸುವ ಕಾರ್ಯ ನಡೆಯುತ್ತಿದೆ,'' ಎಂದು ಹೇಳಿದರು.

''ಮನರೇಗಾ ಬಳಸಿಕೊಂಡು ರೇಷ್ಮೆ ಬೆಳೆಯಲ್ಲಿ ಪ್ರಗತಿ ಸಾಧಿಸುವ ಪ್ರಯತ್ನಗಳು ನಡೆಯುತ್ತಿವೆ. ಆಸ್ಸಾಂನಲ್ಲಿ ಆದಿವಾಸಿ ರೈತರಿಂದ ರೇಷ್ಮೆ ಉತ್ಪಾದನೆ ಮಾಡಿಸಿ ಸರ ಕಾರವೇ ನೇರವಾಗಿ ಖರೀದಿ ಮಾಡುತ್ತಿದೆ. ಜಪಾನ್ ನಂತಹ ದೇಶಗಳಲ್ಲಿ ಸಿಲ್ಕ್ ಮೆಟಿರಿಯಲ್‌ಗೆ ಹೆಚ್ಚಿನ ಬೇಡಿಕೆ ಇದೆ. ಹೀಗಾಗಿ ಸೀರೆ ಮಾತ್ರವಲ್ಲದೆ ಫ್ಯಾಬರಿಕ್ ಮೇಲೂ ಹೆಚ್ಚಿನ ಗಮನಹರಿಸಲಾಗುತ್ತಿದೆ,'' ಎಂದು ತಿಳಿಸಿದರು.

ಬೆಳೆಗಾರರ ಪ್ರೋತ್ಸಾಹ: ''ಕರ್ನಾಟಕ ರೇಷ್ಮೆಯಲ್ಲಿ 9 ಬೆಳೆ ತೆಗೆಯುತ್ತಿದ್ದು, ಉತ್ಪಾದನೆ ಚೆನ್ನಾಗಿದೆ. ಆದರೆ, ಜಮ್ಮುಕಾಶ್ಮೀರದಲ್ಲಿ ಚಳಿಯ ಕಾರಣ ಕೇವಲ 1 ಬೆಳೆ ಮಾತ್ರ ತೆಗೆಯಲಾಗುತ್ತಿದೆ. ಅಲ್ಲಿಯೂ ಒಂದಕ್ಕಿಂತ ಹೆಚ್ಚಿನ ಬೆಳೆ ತೆಗೆಯಲು ಬೇಕಾದ ವಿಧಾನ ಅನುಸರಿಸುವ ಪ್ರಯತ್ನಗಳಿಗೆ ಸಂಶೋಧನೆಗಳು ನಡೆಯುತ್ತಿವೆ,'' ಎಂದು ತಿಳಿಸಿದರು.

''ರೇಷ್ಮೆ ಬೆಳೆಗಾರರ ಹಿತ ಕಾಯುವ ಸಲುವಾಗಿ ಜವಳಿ ಸಚಿವಾಲಯ ಕೇಂದ್ರೀಯ ರೇಷ್ಮೆ ಮಂಡಳಿ (ಸಿಎಸ್‌ಬಿ) ಮೂಲಕ ಹಲವು ಕ್ರಮಗಳನ್ನು ಕೈಗೊಂಡಿದೆ. ಇದರಲ್ಲಿ ರೇಷ್ಮೆ ಬೆಳೆಗಾರರನ್ನು ಪ್ರೋತ್ಸಾಹಿಸಲು 'ಸಿಲ್ಕ್ ಸಮಗ್ರ' ಯೋಜನೆ ಉಪಯುಕ್ತವಾಗಿದೆ. ಈ ಯೋಜನೆ ಸಾಮಾನ್ಯ ವರ್ಗದಡಿ ಕೇಂದ್ರದ ಪಾಲು ಶೇ.50ರಷ್ಟು ರಾಜ್ಯದ ಪಾಲು ಶೇ.25ರಷ್ಟು ಮತ್ತು ಫಲಾನುಭವಿ ಪಾಲು ಶೇ.25ರ ಅನುಪಾತದಂತೆ ಹಾಗೂ ವಿಶೇಷ ಘಟಕ ಗಿರಿಜನ ಉಪಯೋಜನೆಯಡಿ ಕೇಂದ್ರದ ಪಾಲು ಶೇ.65ರಷ್ಟು, ರಾಜ್ಯದ ಪಾಲು ಶೇ.25 ರಷ್ಟು ಮತ್ತು ಫಲಾನುಭವಿ ಪಾಲು ಶೇ.10ರ ಅನುಪಾತದಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ,'' ಎಂದು ಕೇಂದ್ರ ಸಚಿವರು ತಿಳಿಸಿದರು.

23-09-2022
Vijaya Karnataka p 04

ರೇಷ್ಮೆ ಉತ್ಪಾದನೆ ಹೆಚ್ಚಳಕ್ಕೆ ಕೇಂದ್ರದಿಂದ ಉತ್ತೇಜನ



ಕೇಂದ್ರದ ರೈಲ್ವೆ ಮತ್ತು ಜವಳಿ ಖಾತೆ ರಾಜ್ಯ ಸಚಿವೆ ದರ್ಶನ ಜರ್ದೋಶ್ ಅವರು ರಾಮನಗರ ರೇಷ್ಮೆ ಮಾರು ಕಟ್ಟೆಗೆ ಭೇಟಿ ನೀಡಿ ಚಟುವಟಿಕೆಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

ರಾಮನಗರ: ವಿಶ್ವದಲ್ಲಿ ಭಾರತದ ರೇಷ್ಮೆಗೆ ಬೇಡಿಕೆ ಹೆಚ್ಚಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡರ ಸಮನ್ವಯದೊಂದಿಗೆ ರೇಷ್ಮೆ ಬೆಳೆಗಾರರಿಗೆ ವಿವಿಧ ಸೌಲಭ್ಯ ನೀಡಿ, ರೇಷ್ಮೆ ಉತ್ಪಾದನೆ ಹೆಚ್ಚಳಕ್ಕೆ ಉತ್ತೇಜನ ನೀಡಲಾಗುವುದು ಎಂದು ಕೇಂದ್ರದ ರೈಲ್ವೆ ಮತ್ತು ಜವಳಿ ಖಾತೆ ರಾಜ್ಯ ಸಚಿವೆ ದರ್ಶನ ಜರ್ದೋಷ್ ತಿಳಿಸಿದರು.

ರಾಮನಗರ ಜಿಲ್ಲಾ ಕೇಂದ್ರದ ರೇಷ್ಮೆ ಮಾರುಕಟ್ಟೆಗೆ ಭೇಟಿ ನೀಡಿ ಅಲ್ಲಿನ ಗೂಡಿನ ಚಟುವಟಿಕೆಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದು, ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.

ದೇಶದಲ್ಲಿ ರಾಮನಗರ ಜಿಲ್ಲೆಯು ದೊಡ್ಡ ಮಾರುಕಟ್ಟೆ ಹೊಂದಿದ್ದು, ಪ್ರಸ್ತುತ ಜಿಲ್ಲೆಯಲ್ಲಿ 1 ಲಕ್ಷ 30 ಸಾವಿರ ಎಕರೆಯಲ್ಲಿ ರೇಷ್ಮೆ ಬೆಳೆಯಲಾಗುತ್ತಿದೆ. ರೇಷ್ಮೆ ಉತ್ಪಾದನೆಯ ಉತ್ತೇಜನಕ್ಕೆಂದು ಪಾರದರ್ಶಕವಾಗಿ ರಾಜ್ಯ ಸರ್ಕಾರ ಶೇ.50, ಕೇಂದ್ರ ಸರ್ಕಾರ ಶೇ.25 ರಷ್ಟು ಹಾಗೂ ಎಸ್‌ಸಿ, ಎಸ್‌ಟಿ ಶೇ.90ರಷ್ಟು ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ಹೇಳಿದರು.

ಭಾರತವು ಪ್ರಪಂಚದಲ್ಲಿ ಅತಿ ಹೆಚ್ಚು ರೇಷ್ಮೆ ಬೆಳೆಯುವ ಸಂಕಲ್ಪ ಹೊಂದಿದ್ದು, ಅಂದಾಜು 11 ಸಾವಿರದಷ್ಟು ರೇಷ್ಮೆ ಪ್ರಸ್ತುತ ಭಾರತದಲ್ಲಿ ತಯಾರಾಗುತ್ತಿದೆ. ಫ್ಯಾಕ್ಟರಿ ಟು ಫಾರಿನ್ ರಾಮನಗರದಲ್ಲಿ ಬೃಹತ್ ರೇಷ್ಮೆ ಮಾರುಕಟ್ಟೆ ನಿರ್ಮಿಸಲು ಆಡಳಿತಾತ್ಮಕ ಹಾಗೂ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. ಅಗತ್ಯವಿದ್ದಲ್ಲಿ ಕೇಂದ್ರ ಸರ್ಕಾರದಿಂದ ಅಗತ್ಯ ನೆರವು ನೀಡಲಿದೆ ಎಂದು ತಿಳಿಸಿದರು.

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ.: BE-29-2022-23-OT-15

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ 10ಎಲ್‌ಸಿ ಗೇಟ್‌ಗಳ (07 ಎಲ್‌ಸಿ ಗೇಟ್‌ಗಳು) ಇಂಟರ್‌ಲಾಕಿಂಗ್‌ಗೆ ಸಂಬಂಧಿಸಿದಂತೆ ಸಿಗ್ನಲಿಂಗ್ ವ್ಯವಸ್ಥೆಯ ಪೂರೈಕೆ ಮಾಡುವುದು. ಎಲ್‌ಸಿ ಸಂ. 31, 34, 46, 50, 24, 5 & 75ಕ್ಕೆ ಬೇಕಾದ ವಿದ್ಯುತ್ ವ್ಯವಸ್ಥೆಗಳು ಹಾಗೂ ಸಹಾಯಕ ವಿಭಾಗೀಯ ಇಂಜಿನಿಯರ್/ಬಂಗಾರಪೇಟೆ ಉಪ-ವಿಭಾಗ, ವಿದ್ಯುತ್ ಕಾಮಗಾರಿ ವ್ಯಾಪ್ತಿಯಲ್ಲಿ ಬರುವ ಮುಲನೂರ ನಿಲ್ದಾಣದಲ್ಲಿ ಪ್ರಸ್ತಾವನೆಯಂತೆ 450ಮೀ ಉದ್ದದ (ರಸ್ತೆ ಸಂ: 04) ಉನ್ನತ ಮಟ್ಟದ ಪ್ಲಾಟ್‌ಫಾರ್ಮ್ ನಿರ್ಮಾಣ ಕಾಮಗಾರಿ.	ರೂ. 18,55,585/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07.10.2022, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್ ಬೆಂಗಳೂರು

PUB/380/AAD/PRB/SWR/2022-23

S.W.Railways SWRRLY SWR

23-09-2022
Udaya Vani p 05